ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,
ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 41/2020**

ಚಾ.ಸಾ. **:- 16**
ಪ್ರಾ.ಸಾ. **:- 06**

| | | |
|---|---|---|
| ಹೆಸರು | : | ಕೃಷ್ಣಪ್ಪ.ಕೆ.ವಿ. |
| ತಂದೆಯ ಹೆಸರು | : | ಲೇಟ್ ಕೆ.ಜಿ.ವೆಂಕಟರಾಮಯ್ಯ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಪಿ.ಐ., ಹೈಗ್ರೌಂಡ್ಸ್ ಸಂಚಾರಿ ಪೊ.ಠಾಣೆ, ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು. |

ಪ್ರಮಾಣೀಕರಿಸಲಾದ ದಿನಾಂಕಃ- **23.03.2026.**

ಮುಖ್ಯ ವಿಚಾರಣೆ **:** ಮಾನ್ಯ ಸ.ಸ.ಅ.ರವರಿಂದ **:**

ನಾನು 2019 ರಿಂದ 2020 ರ ಅವಧಿಯಲ್ಲಿ ಶ್ರೀರಂಗಪಟ್ಟಣದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 11.06.2019 ರಂದು ನಾನು ಚಾ.ಸಾ-15 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆ ಮುಂದುವರೆಯಿಸಿರುತ್ತೇನೆ.

ಮೃತರ ಪಿ.ಎಂ.ವರದಿಯನ್ನು ಸ್ವೀಕರಿಸಿ ಕಡತಕ್ಕೆ ಲಗತ್ತಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ನಂತರ ಅಪಘಾತಕ್ಕೆ ಒಳಗಾದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೋಟೀಸ್ ಮತ್ತು ಉತ್ತರವನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು.

ಆರ್.ಟಿ.ಓ.ಅಧಿಕಾರಿಗಳು ವಾಹನವನ್ನು ಪರಿಶೀಲಿಸಿದ ನಂತರ ವಾಹನವನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ಅಪಘಾತಕ್ಕೆ ಸಂಬಂಧಿಸಿದಂತೆ ಎರಡೂ ವಾಹನಗಳನ್ನು ಪರಿಶೀಲನೆ ಮಾಡಿ ಐ.ಎಂ.ವಿ.ವರದಿ ಸಲ್ಲಿಸುವಂತೆ ಆರ್.ಟಿ.ಓ.ರವರಿಗೆ ಮನವಿ ಸಲ್ಲಿಸಿ, ನಂತರದಲ್ಲಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಐ.ಎಂ.ವಿ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

ಆರೋಪಿ-2 ಠಾಣೆಗೆ ಹಾಜರಾಗಿದ್ದು, ಅವರಿಗೆ ನೋಟೀಸ್ ಜಾರಿ ಮಾಡಿ ಬಾಂಡ್ ಪಡೆದು ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಿರುತ್ತೇನೆ.

ತನಿಖಾ ಸಮಯದಲ್ಲಿ ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

ನಂತರ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು **:** ಆರೋಪಿ ಪರ ವಕೀಲರಿಂದ **:**</u>

ನಾನು ಸ್ಥಳಕ್ಕೆ ಭೇಟಿ ಕೊಟ್ಟಿರುತ್ತೇನೆ, ಈ ಬಗ್ಗೆ ಕೇಸ್ ಡೈರಿಯಲ್ಲಿ ಬರೆದಿರುತ್ತೇನೆ. ನಾನು ಸರಿಯಾಗಿ ದಾಖಲೆ ಪರಿಶೀಲಿಸದೇ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ **:-**</u> ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ**.**ಎಂ.ಎಫ್.ಸಿ**.,** ಶ್ರೀರಂಗಪಟ್ಟಣ**.**

**ಸಾಕ್ಷಿದಾರರ ಸಹಿ.**